ನಿಯಮ ೩೫ಳಿಲರ ಮೇರೆಗೆ

ಶಿವಮೊಗ್ಗ ಜಿಲ್ಲೆಯಲ್ಲಿನ ಅಭಾವ ಪರಿಹಾರ ಕಾರ್ಯಕ್ರಮಗಳ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಶಿವಮೊಗ್ಗ ಜಿಲ್ಲೆಯಲ್ಲಿ ೧೯೮೬-೮೭ನೇ ಸಾಲಿನಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ ಬರಗಾಲಕ್ಕೆ ತುತ್ತಾದ ಗ್ರಾಮಗಳ ಸಂಖ್ಯೆ ಎಷ್ಟು ? ಮತ್ತು ಈ ರೀತಿ ಬರಗಾಲಕ್ಕೆ ತುತ್ತಾದ ಗ್ರಾಮದ ಕೃಷಿ ಕೂಲಿ ಕಾರ್ಮಿಕರು ಕೆಲಸವಿಲ್ಲದೆ ಪಲಸೆ ಹೋಗುತ್ತಿರುವುದರಿಂದ ಪ್ರತಿಯೊಂದು ತಾಲ್ಲೂಕಿನಲ್ಲಿ ನವೆಂಬರ್ ೮೬ ರಿಂದ ಈವರೆಗೆ ಬರಗಾಲ ಕಾಮಗಾರಿಯಲ್ಲಿ ಖರ್ಚು ಮಾಡಿರುವ ಹಣವೆಷ್ಟು ? ಮತ್ತು ಶಿಕಾರಿಪುರ, ಹೊನ್ನಾಳಿ ಚೆನ್ನಗಿರಿ ತಾಲ್ಲೂಕಿಗೆ ಕಳೆದ ೩ ತಿಂಗಳಿಂದ ಆರ್.ಇ.ಜಿ.ಎಫ್. ಮತ್ತು ಬರಗಾಲ ಕಾಮಗಾರಿಯಲ್ಲಿ ವ ಂಚೂರು ಮಾಡಿರುವ ಹಣ ವೆಷ್ಟು ಎಂಬ ವಿಷಯವನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮಂತ್ರಿಯವರು, ಕಂದಾಯ ಮಂತ್ರಿಯವರ ಪರವಾಗಿ).—ಸಮಯಕ್ಕೆ ಸರಿಯಾಗಿ ಆಪಶ್ಯವಿದ್ದಷ್ಟು ಮಳೆ ಬಾರದ ಕಾರಣ ಉಂಟಾಗಿರ ವ ಪರಿಸ್ಥಿತಿಯಿಂದ ಈ ವರ್ಷ ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಒಟ್ಟು ೭೨೭ ಗ್ರಾಮಗಳನ್ನು ಬರಗಾಲ ಪೀಡಿತವೆಂದು ಗುರುತಿಸಿದ್ದು. ತಾಲ್ಲೂಕಂವಾರು ವಿವರ ಈ ರೀತಿ ಇದೆ. ಶಿವಮೊಗ್ಗ ೧೦೪, ಚನ್ನಗಿರಿ ೧೭೨, ಹೊನ್ನಾಳಿ ೧೦೧, ತೀರ್ಥಹಳ್ಳಿ ೧೨೦, ಶಿಕಾರಿಪುರ ೮೪, ಸಾಗರ ೫೩, ಸೊರಬ ೮೩, ಹೊಸನಗರ ೨೦, ಸದರಿ ಹಳ್ಳಿಗಳಲ್ಲಿ ಬರಗಾಲ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಬರ ಪರಿಹಾರ ೨೯ರ್ಷಿಕೆಯ ಕೆಳಗೆ ೧೯೮೬ ರ ಡಿಸೆಂಬರ್‌ನಲ್ಲಿ ನಾಲ್ಕು ಲಕ್ಷ ರೂಗಳನ್ನು ಬಿಡುಗಡೆ ಮಾಡಲಾಗಿದೆ. ಮೂವತ್ತು ಕಾಮಗಾರಿಗಳು ಮುಂಜೂರಾಗಿದ್ದು, ಅವುಗಳು ಪ್ರಗತಿಯಲ್ಲಿವೆ. ಇದಲ್ಲದೇ ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳಿಗೆ ಅಗತ್ಯ ವಿರುವ ಪ್ರದೇಶವಿರುವ ಪ್ರದೇಶಗಳಲ್ಲಿ ಯೋಜನಾ ಕಾರ್ಯಕ್ರಮಗಳಾದ ಎನ್ ಆರ್ ಇ ಪಿ, ಆರ್ ಎಲ್ ಇ ಜಿ ಪಿ, ಡಿ ಪಿ ಎ ಪಿ, ಮತ್ತು ಇತರೇ ಇಲಾಖಾ ಯೋಜನೆ ಕಾರ್ಯಕ್ರಮಗಳಡಿ ದೊರೆಯುವ ಹಣವನ್ನು ಉಪಯೋಗಿಸಿಕೊಂಡು ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತೆ ಈಗಾಗಲೇ ಆದೇಶಗಳನ್ನು ಹೊರಡಿಸಲಾಗಿದೆ, ಶಿವಮೊಗ್ಗ ಜಿಲ್ಲೆಗೆ ಎನ್ ಆರ್ ಇ ಪಿ ಆರ್, ಎಲ್ ಇ ಜಿ ಪಿ ಮತ್ತು ಡಿ ಪಿ ಎ ಪಿ ಕಾರ್ಯಕ್ರಮಗಳಿಗೆ ಅನುಕ್ರಮವಾಗಿ ೮೫.೯೬ ಲಕ್ಷ ಮತ್ತು ೧೧.೨೧ ಲಕ್ಷ ರೂಗಳನ್ನು ಈ ವರ್ಷದ (ಅಂದರೆ ೧-೪-೮೬ ರಿಂದ ೩೧-೧೦-೮೬ ರವರೆಗೆ) ಅವಧಿಯಲ್ಲಿ ಬಿಡುಗಡೆಯಾಗಿದೆ. ಆರ್ ಇ ಜಿ ಎನ್ ಯೋಜನೆಗೆ ಚನ್ನಗಿರಿ ತಾಲ್ಲೂಕು ಆಯ್ಕೆ ಮಾಡಿದ್ದು ಆ ಕಾರ್ಯಕ್ರಮಕ್ಕಾಗಿ ೨೫ ಲಕ್ಷ ರೂಗಳನ್ನು ಮುಂಜೂರು ಮಾಡಿದ್ದು. ಅದರಲ್ಲಿ ೧೨.೫೦ ಲಕ್ಷ ರೂಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಜಿಲ್ಲಾಧಿಕಾರಿಯವರಿಗೆ ಅವಶ್ಯವಿರುವ ಪ್ರದೇಶಗಳಲ್ಲಿ ಅಭಾವ ಪರಿಹಾರ ಕಾರ್ಯಕ್ರಮಗಳನ್ನು ಪರಿಸ್ಥಿತಿ ಸುಧಾರಿಸುವವರೆಗೆ ಮುಂದುವರೆಸಿಕೊಂಡು ಬರಲು ನಿರ್ದೇಶಿಸಲಾಗಿದೆ.

೨) ಕನ್ನಡ ನಾಡಿನ ಗಣ್ಯ ವ್ಯಕ್ತಿಗಳಾದ ತಗಡೂರು ರಾಮಚಂದ್ರರಾಯರ ಸಾಕ್ಷ್ಯ ಚಿತ್ರ ನಿರ್ಮಿಸುವ ಬಗ್ಗೆ

ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯು ಕನ್ನಡನಾಡಿನ ಹಿರಿಮೆಗಾಗಿ ದುಡಿದ ಹಲವು ಗಣ್ಯರ ಸಾಕ್ಷ್ಯ ಚಿತ್ರವನ್ನು ಈಗಾಗಲೇ ತೆಗೆದಿದೆ. ಕಳೆದ ಎರಡು ವರ್ಷಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣಹೆಗಡೆಯವರು ಈ ದೇಶದ ಖ್ಯಾತ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಮಹಾತ್ಮ ಗಾಂಧಿಯವರ ಅನುಯಾಯಿಗಳಾದ ಹಾಗೂ ಜಮನ್‌ಲಾಲಬಜಾಜ್ ಪ್ರಶಸ್ತಿ ವಿಜೇತರಾದ ಶ್ರೀ ತಗಡೂರು ರಾಮಚಂದ್ರರಾಯರ ಮನೆಗೆ ಭೇಟಿ ಕೊಟ್ಟಾಗ ಅವರ ಜೀವನದ ಸಾಕ್ಷ ಚಿತ್ರವನ್ನು ತೆಗೆಯುವುದಾಗಿ ಆಶ್ವಾಸನೆ ನೀಡಿದ್ದರು. ಎರಡು ವರ್ಷಗಳು ಕಳೆದರೂ ಇದು ಇನ್ನೂ ಕಾರ್ಯಗತವಾಗಿಲ್ಲ. ಶ್ರೀ ತಗಡೂರರು ಎಂಬತ್ತು ವರ್ಷ ದಾಟಿ ಈಗ ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕರ್ನಾಟಕದಲ್ಲಿನ ಖ್ಯಾತ ಗಾಂಧಿ ಆದರ್ಶವಾದಿಗಳಾದ ತಗಡೂರರ ಸಾಕ್ಷ ಚಿತ್ರವನ್ನು ತೆಗೆಯಲು ಸರ್ಕಾರವು ತಡಮಾಡದೇ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.